4) ಅಧ್ಯಕ್ಷರ ಅಪ್ಪಣೆ ಮೇರೆಗೆ :

ಅ) ವಿಷಯ : ಘನತೆವೆತ್ತ ರಾಷ್ಟ್ರಪತಿಗಳ ಭಾಷಣದ ಮೇಲೆ ಚರ್ಚಿಸಲು ಅವಕಾಶ ನೀಡುವ ಬಗ್ಗೆ.

ಮಾನ್ಯ ಸದಸ್ಯರು :- ಮಾನ್ಯ ಅಧ್ಯಕ್ಷರೆ,

(ಗೊಂದಲ)

ಅಧ್ಯಕ್ಷರು :- ಈಗ ಎಲ್ಲರೂ ಮಾತನಾಡುವುದಕ್ಕೆ ನಿಂತಿದ್ದೀರಿ. ನಾನು ಕರೆದಿದ್ದೇನೆ. ಈಗ ರೆಡ್ಡಿಯವರೆ, ಮಾನ್ಯ ಶ್ರೀನಿವಾಸಗೌಡರೇನೋ ಅದೇನೋ ಎಲ್ಲೋ ಹೋಗಬೇಕು, ನಾನು ಬಹಳ ಅರ್ಜೆಂಟ್‌ನಲ್ಲಿದ್ದೇನೆ, ಎಂದು ಹೇಳಿದರು. ಅದಾದಮೇಲೆ ನೀವು ಮಾತನಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನಿನ್ನೆ ಮಾತನಾಡಲಿಕ್ಕೆ ನನಗೆ . . . .

ಅಧ್ಯಕ್ಷರು :- ನಾನು ನಿಮ್ಮನ್ನು ಕರೆದಿದ್ದೇನೆ. ಆದರೆ, ಕೇಳಿ ಸ್ವಾಮಿ, ಅವರೇನು ಹೇಳುತ್ತಿದ್ದಾರೆಂದರೆ, ಅವರೇನೋ ಅರ್ಜೆಂಟ್ ಆಗಿ ಯಾವುದೋ ಫಂಕ್ಷನ್‌ಗೆ ಹೋಗಬೇಕೆಂದರು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನಮಗೂ ಅರ್ಜೆಂಟ್ ಇದೆ. ನಾಮಿನೇಷನ್ ಫೈಲ್ ಮಾಡಬೇಕು.

(ಗೊಂದಲ)

ಅಧ್ಯಕ್ಷರು :- ಈಗ ಈ ತರಹ ಮಾಡಿದರೆ ನಾವು ಹೇಗೆ ಮಾಡುವುದು ? ಅವರಾದಮೇಲೆ ನಿಮ್ಮನ್ನು ಕರೆಯುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಅಲ್ಲ, ನಿನ್ನೆಯೇ ನೀವು ಹೇಳಿದ್ದೀರಿ. ಮತ್ತೆ . . . .

ಅಧ್ಯಕ್ಷರು :- ನೋ, ನೋ, ನಾಳೆ ಮಾತನಾಡುವಿರಿ ಎಂದೆ. ಈಗೇನು ಎಂದರೆ, ನಾನು ನಿಮ್ಮನ್ನು ಕರೆದಿದ್ದೆ. ಅಷ್ಟರಲ್ಲಿ ಏನೋ ಅವರು ಬಹಳ ತುರ್ತುನಲ್ಲಿದ್ದಾರೆ. ಶ್ರೀನಿವಾಸಗೌಡರೆ, ದಯಮಾಡಿ 15 ನಿಮಿಷಗಳ ಕಾಲಕ್ಕಿಂತ ಹೆಚ್ಚು ಯಾರೂ ಮಾತನಾಡಬಾರದು.

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್ :- ನಾನು ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ, ಎಲ್ಲಾ ಹಿಂದಿನ ಬೆಂಚಿನ ಹೊಸ ಸದಸ್ಯರು ನನ್ನನ್ನು ಕರೆದು ಮುಂದಿನವರು ನೀವು ಎದ್ದು ಎದ್ದು ನೀವೇ ಮಾತನಾಡಿಬಿಡುತ್ತೀರಿ. ನಿಮಗೆ ವೇಳೆಯೆಲ್ಲಾ ಹೋಗಿಬಿಡುತ್ತದೆ. ನಮಗೇನೂ ವೇಳೆಯೇ ಸಿಗುವುದಿಲ್ಲ. ನಾವೇನೂ ತಯಾರಾಗುವುದು ಬೇಡವೆ ? ನಾವೇನೂ ಕಲಿಯುವುದು ಬೇಡವೆ ಅನ್ನುವ ವಿಚಾರ ಬಂದಿದೆ. ಅದಕ್ಕೆ ಇನ್ನು ಮೇಲೆ ಹಿಂದಿನ ಬೆಂಚಿನಿಂದ ಮುಂದಕ್ಕೆ ತೆಗೆದುಕೊಳ್ಳಿ.

ಅಧ್ಯಕ್ಷರು :- ಈಗ ಅದಕ್ಕೇನೆಂದರೆ, ...

ಶ್ರೀ ಎಸ್.ಎಸ್. ಪಾಟೀಲ್ :- ಅವರಿಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು :- ಸ್ವಾಮಿ, ನಿಮ್ಮ ನಾಯಕರಿದ್ದಾರಲ್ಲಾ, ಸಾಮಾನ್ಯವಾಗಿ ನಿಮ್ಮ ವಿಪ್ ಇದ್ದಾರಲ್ಲಾ, ಅವರು ನಮಗೆ ಪಟ್ಟಿ ಕಳುಹಿಸುತ್ತಾರೆ. ಅವರೇನೆಂದರೆ, ಹೊಸಬರು ಈ ಸಾರಿ ಮೊದಲನೇ ಸಾರಿ ಬಂದಿರುವವರ ಪಟ್ಟಿ ಕಳುಹಿಸಿದರೆ ನನ್ನದೇನೂ ಅಡ್ಡಿಯಿಲ್ಲ.

(ಗೊಂದಲ)

ಅಧ್ಯಕ್ಷರು :– ಆದ್ದರಿಂದ, ನೀವು ನಿಮ್ಮ ಪಕ್ಷದ ವತಿಯಿಂದ ಒಂದು ಪಟ್ಟಿ ಕಳುಹಿಸುವುದು ಒಳ್ಳೆಯದು. ನಾನು ಅವರಿಗೆ ಅವಕಾಶ ಕೊಡಬೇಕೆಂದರೆ ಕೊಡುತ್ತೇನೆ. ಇಲ್ಲದಿದ್ದರೆ ಹೇಗಾಗುತ್ತದೆ ಹೇಳಿ ?

(ಗೊಂದಲ)

ಅಧ್ಯಕ್ಷರು :– ಅದನ್ನು ಪ್ರತಿಯೊಂದು ಪಕ್ಷದವರೂ ಗಮನದಲ್ಲಿಟ್ಟುಕೊಳ್ಳಬೇಕು. ದಯಮಾಡಿ ಕೇಳಿ, ಮೊದಲನೇ ಸಾರಿ ಆರಿಸಿ ಬಂದಿರತಕ್ಕಂಥ ಅನೇಕ ಸದಸ್ಯರು ನಾವು ಬಾಯಿಬಿಡುವುದಕ್ಕೇ ಆಗುತ್ತಿಲ್ಲ, ಮೊದಲನೇ ಸಾಲಿನವರೇ ಹಿರಿಯ ಸದಸ್ಯರು ಹೆಚ್ಚಿನ ಕಾಲಾವಕಾಶ ತೆಗೆದುಕೊಂಡು ಬಿಡುತ್ತಾರೆ. ಹಾಗಾಗಿ, ನಾವು ಆಸಕ್ತಿಯನ್ನೇ ಕಳೆದುಕೊಂಡುಬಿಡುತ್ತೇವೆ, ನಾವು ಒಳಗೆ ಕುಳಿತುಕೊಳ್ಳುವುದಿಲ್ಲ, ಹೊರಗಡೆ ಲಾಂಜ್‌ನಲ್ಲಿ ಕುಳಿತುಕೊಳ್ಳುತ್ತೇವೆ ಎಂಬ ಮಾತನ್ನು ಹೇಳಿದ್ದಾರೆ. ಅದು ಬೇರೆ ವಿಚಾರ. ಆದರೆ, ಏನು ನಿಮ್ಮ ಪಾರ್ಟಿ ಮುಖಂಡರುಗಳು, ವಿಪ್, ಏನು ನಮಗೆ ಪಟ್ಟಿ ಕಳುಹಿಸುತ್ತಾರೆ, ಅವರು ಇನ್ನು ಮುಂದೆ ಇದನ್ನೆಲ್ಲಾ ಗಮನಿಸಿ ಕಳುಹಿಸಬೇಕು.

ಶ್ರೀ ಬಸವರಾಜ ರಾಯರೆಡ್ಡಿ :– ಮಾನ್ಯ ಅಧ್ಯಕ್ಷರೆ, ನನಗೆ . . . .

ಅಧ್ಯಕ್ಷರು :– ಶ್ರೀನಿವಾಸಗೌಡರೆ, ... ಈಗ ಬೇರೆ ವಿಚಾರ ಬೇಡಿ ನೀವು ದಯಮಾಡಿ, 15 ನಿಮಿಷದಲ್ಲಿ ಮುಗಿಸಬೇಕು. ಈಗ ನೋಡಿ 12.55 ಆಗಿದೆ, ಅಂದರೆ ನೀವು 1.10 ಗಂಟೆಯೊಳಗೆ ಮುಗಿಸಬೇಕು.

(ಗೊಂದಲ)

ಅಧ್ಯಕ್ಷರು :– ಆಯಿತು, ಆಯಿತು, ನಾನು ಅವರನ್ನು ಕರೆದಿದ್ದೇನೆ. ಮಾನ್ಯ ಶ್ರೀರಾಮರೆಡ್ಡಿಯವರಿಗೆ ಅವಕಾಶ ಕೊಟ್ಟಿದ್ದೆ. ಈಗ ಅವರೇನೋ ಹೋಗಬೇಕು ಅನ್ನುತ್ತಿದ್ದಾರೆ. ಅದಕ್ಕೆ ನಾನು ಅವರನ್ನು ಕರೆದಿದ್ದೇನೆ. ಆಯಿತು, ಎಲ್ಲರಿಗೂ ಅವಕಾಶ ಕೊಡೋಣ ಬಿಡಿ. ಕೊಡುತ್ತೇನೆ. ಬಿಡಿ. ಏಕೆ ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ದಯವಿಟ್ಟು, ಈಗ ದಯಮಾಡಿ, ನಾನೇನು ಹೇಳುವುದು ಏನೆಂದರೆ, ಅನೇಕ ಜನ ಸದಸ್ಯರು ಮಾತನಾಡುವುದಕ್ಕೆ ಇಷ್ಟಪಟ್ಟಿದ್ದಾರೆ. ಆದರೆ, ನಮ್ಮ ಬಿಸಿನೆಸ್ ಅಡ್ವೈಸರ್ ಕಮಿಟಿಯಲ್ಲಿ ಇವತ್ತು ಮುಗಿಸಬೇಕೆಂದು ಆಗಿದೆ. ಆದ್ದರಿಂದ, ನಾನು ಏನು ಸಭೆಯ ಸಲಹೆ ಕೇಳುತ್ತಿದ್ದೇನೆ ಅಂದರೆ, ಇವತ್ತು ರಾತ್ರಿ 8 ಗಂಟೆವರೆಗೂ ಕುಳಿತುಕೊಳ್ಳೋಣ 6 ಗಂಟೆವರೆಗೆ ಈ ಚರ್ಚೆಯಲ್ಲಿ ಎಲ್ಲಾ ಸದಸ್ಯರು ಭಾಗವಹಿಸಲಿ. 6 ಗಂಟೆ ಮೇಲೆ ಕೆಲವರು ಸಚಿವರು ಮತ್ತು ಮುಖ್ಯಮಂತ್ರಿಗಳು ಉತ್ತರ ಅಂದರೆ, ಅವರ ರಿಯಾಕ್ಷನ್ಸ್, ಸರ್ಕಾರದಿಂದ ಇದರ ಬಗ್ಗೆ ಏನು ಮಾಡುತ್ತಾರೆ ಎನ್ನುವುದನ್ನು ಹೇಳಲಿ. ದಯಮಾಡಿ, ಎಲ್ಲರೂ ಸಹಕರಿಸಬೇಕು. ಅದಕ್ಕಿಂತ ಮೊದಲು ಎಲ್ಲರಿಗೂ ಅವಕಾಶ ಕೊಡುವುದಕ್ಕಾಗುವುದಿಲ್ಲ. ಹಿರಿಯ ಸದಸ್ಯರು 15 ನಿಮಿಷ, ಮತ್ತು ಹೊಸ ಸದಸ್ಯರು 10 ನಿಮಿಷದೊಳಗೆ ತಾವು ತಮ್ಮ ಭಾಷಣಗಳನ್ನು ಮುಗಿಸಬೇಕೆಂದು ನಾನು ಹೇಳುತ್ತೇನೆ. ಈಗ ಅವರಿಗೆ ಅವಕಾಶ ಕೊಟ್ಟಿದ್ದೇನೆ. ನಂತರ ನಿಮ್ಮನ್ನು ಕರೆಯುತ್ತೇನೆ. ಎಲ್ಲರಿಗೂ ಅವಕಾಶ ಕೊಡುತ್ತೇನೆ, ಕುಳಿತುಕೊಳ್ಳಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಮಾನ್ಯ ಅಧ್ಯಕ್ಷರೆ, ಅದಕ್ಕೆ ಮುಂಚೆ, ಈಗ 24 . . . .

ಶ್ರೀ ಎಂ.ಪಿ. ಪ್ರಕಾಶ್ :– ತಾವು ಸಮಯವನ್ನು ನಿಗದಿ ಮಾಡಿದ್ದೀರಿ. ಆ ಸಮಯ ನಿಗದಿ ಪ್ರಕಾರ, ತಾವು 15 ನಿಮಿಷ ಎಂದು ಹೇಳಿ ಹೇಳುವುದಕ್ಕಿಂತ, ನಮ್ಮ ಪಕ್ಷದಿಂದ ಬಹಳ ಜನ ಮಾತನಾಡಿಲ್ಲ. ಆದ್ದರಿಂದ, ನಮಗೆ ಇಟ್ಟಿರುತಕ್ಕಂಥ ಸಮಯ ಮತ್ತು ಅವರಿಗೆ ಕೊಟ್ಟಿರುವಂಥ ಸಮಯ ಈ ಲೆಕ್ಕಾಚಾರದ ಮೇಲೆ ತಾವು ನಿಗದಿಪಡಿಸಿ. ಅದರ ಪ್ರಕಾರ ಮಾತನಾಡಲಿಕ್ಕೆ ತಾವು ತಯಾರಿದ್ದೇವೆ.

ಅಧ್ಯಕ್ಷರು :– ಆಯಿತು.

ಆ) ಬೆಂಗಳೂರಿನ ಜೋಗುಪಾಳ್ಯದಲ್ಲಿ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಕುಳಿತುಕೊಳ್ಳಲು ಅವಕಾಶ ನೀಡದಿರುವ ಬಗ್ಗೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) :– ಮಾನ್ಯ ಅಧ್ಯಕ್ಷರೆ, ಅದಕ್ಕೆ ಮುಂಚೆ, 24 ಜನ ವಿದ್ಯಾರ್ಥಿಗಳಿಗೆ ಜೋಗುಪಾಳ್ಯದಲ್ಲಿ ನಿನ್ನೆ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಕುಳಿತುಕೊಳ್ಳಲು ಬಿಟ್ಟಿಲ್ಲ. ಹಾಲ್‌ಟಿಕೆಟ್ಟೇ ಬಂದಿಲ್ಲವಂತೆ. ಇವತ್ತೂ ಸಹ ಬೆಳಿಗ್ಗೆ ಏನಾಗಿದೆ ಎಂದು ಗೊತ್ತಿಲ್ಲ. ಅದಕ್ಕೋಸ್ಕರ . . .

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ :– ಹೆಗ್ಡೆಯವರು ಹೇಳಿದಹಾಗೆ, ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಸರ್ಕಾರ ಉತ್ತರ ಹೇಳಲಿ.

ಶ್ರೀ ಅಂಜನಮೂರ್ತಿ :– ಮಾನ್ಯ ಶಿಕ್ಷಣ ಮಂತ್ರಿಗಳಾದ ಹೊರಟ್ಟಿಯವರು ಹೇಳಲಿ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ :– ನಾವಲ್ಲ–ರೀ ಮಂತ್ರಿಗಳು. ನಾವು ಅವರ ಪರವಾಗಿಯೇ ಇದ್ದೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಸರ್ಕಾರದಿಂದ ಉತ್ತರವೇನು ಬೇಕೆಂದರೆ, ನಿನ್ನೆ ದಿವಸ 24 ಮಂದಿ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಕುಳಿತುಕೊಳ್ಳಲಿಕ್ಕಾಗಲಿಲ್ಲ. ಆದ್ದರಿಂದ ಅವರಿಗೆ ಮರುಪರೀಕ್ಷೆ ಮಾಡುತ್ತಾರಾ ಎಂಬುದನ್ನು ತಿಳಿಸಬೇಕಾಗಿದೆ. ಯಾವ ಅಧಿಕಾರಿ ಹಾಲ್‌ಟಿಕೆಟ್ ಕೊಟ್ಟಿಲ್ಲ, ಅವರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆಂಬುದನ್ನು ಈ ಸದನಕ್ಕೆ ಹೇಳಬೇಕು.

ಅಧ್ಯಕ್ಷರು :– ಈಗ ಮಂತ್ರಿಮಂಡಲದ ಪರವಾಗಿ ಹೇಳಿ.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಮಂತ್ರಿಗಳು) :– ಹೆಗ್ಡೆಯವರೇನು ವಿಷಯ ಪ್ರಸ್ತಾಪಿಸಿದ್ದಾರೆ, ಅದರ ಬಗ್ಗೆ ತಕ್ಷಣವೇ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ತಕ್ಷಣ ಅದಕ್ಕೇನು ಕ್ರಮ ಕೈಗೊಳ್ಳಬೇಕೆನ್ನುವಂಥದ್ದು ಮಾಡಿ . . . .

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ರೀ–ಎಗ್ಜಾಮ್ ಬಗ್ಗೆ . . . .

ಶ್ರೀ ಜಗದೀಶ್ ಶೆಟ್ಟರ್ :– ಅಧಿಕಾರಿಗಳ ಕಡೆಯಿಂದ ಒಂದು ವರದಿ ತರಿಸಿಕೊಂಡು ಏನು ರೀ–ಎಗ್ಜಾಮ್ ತೆಗೆದುಕೊಳ್ಳಲಿಕ್ಕೆ ಸಾಧ್ಯವಿದೆಯೋ ಅಥವಾ ಏನು ಮಾಡಲಿಕ್ಕೆ ಸಾಧ್ಯವಿದೆ, ಪರಿಹಾರ ಸಿಗಲಿಕ್ಕೆ ಏನು ಸಾಧ್ಯವಿದೆ ಅದನ್ನು ನಾನು ಮಾಡುತ್ತೇನೆ.